# ನಿವಾಳಿಸುವುದು ಮತ್ತು ಮಾನಸ ದೃಷ್ಟಿ
## (ವಾಸ್ತು, ವಾಹನ ಮತ್ತು ಗಿಡಗಳಿಗೆ ದೃಷ್ಟಿ ತಗಲಬಾರದೆಂದು ಮಾಡುವ ಉಪಾಯಗಳೊಂದಿಗೆ)

## ಮನೋಗತ

ಭೂತಪ್ರೇತಗಳಂತಹ ಅದೃಶ್ಯ ಶಕ್ತಿಗಳ ಸಂಶೋಧನೆಯನ್ನು ಪಾಶ್ಚಾತ್ಯರು ಇತ್ತೀಚಿಗಿನ ಕಾಲದಲ್ಲಿ ಮಾಡಿದ್ದಾರೆ. ಇಂದು ಭೂತಗಳ ಬಗೆಗಿನ ಮಾಹಿತಿಯನ್ನು ನೀಡುವ ಅನೇಕ ಜಾಲತಾಣಗಳಿವೆ. ನಮ್ಮ ಹಿಂದೂ ಪೂರ್ವಜರು ಸಾವಿರಾರು ವರ್ಷಗಳ ಹಿಂದೆಯೇ ಈ ಅದೃಶ್ಯ ಶಕ್ತಿಗಳ ಬಗೆಗಿನ ಮಾಹಿತಿಯನ್ನು ನೀಡಿದ್ದಾರೆ, ಇಷ್ಟೇ ಅಲ್ಲದೇ ಈ ಶಕ್ತಿಗಳ ತೊಂದರೆಗಳಿಂದ ರಕ್ಷಣೆಯನ್ನು ಪಡೆಯಲು ಸುಲಭ ಉಪಾಯಪದ್ಧತಿಗಳನ್ನೂ ಹೇಳಿದ್ದಾರೆ. 'ನಿವಾಳಿಸು'ವುದು ಅದರಲ್ಲಿನ ಒಂದು ಪದ್ಧತಿಯಾಗಿದೆ.

ಭೂಲೋಕದಲ್ಲಿರುವಾಗ ಇಚ್ಛೆ ಮತ್ತು ವಾಸನೆಗಳು ಅತೃಪ್ತವಾಗಿರುವ ನಮ್ಮ ಪೂರ್ವಜರು ಅಥವಾ ಇತರ ಜೀವಗಳು ಇಹಲೋಕವನ್ನು ಬಿಟ್ಟು ಹೋದನಂತರ ನಮಗೆ ತೊಂದರೆಗಳನ್ನು ಕೊಡುತ್ತಾರೆ ಎಂದು ಹೇಳಿದರೆ, ನಂಬಲು ಸಾಧ್ಯವಿಲ್ಲ ಅಲ್ಲವೇ ? ಆದರೆ ಈ ಸತ್ಯವನ್ನು ತಿಳಿದುಕೊಳ್ಳಲು ಇದರ ಹಿಂದಿನ ಕಾರಣವನ್ನು ತಿಳಿದುಕೊಳ್ಳಬೇಕಾಗುತ್ತದೆ. ಅತೃಪ್ತ ಪೂರ್ವಜರ ಆತ್ಮಗಳು ಅಥವಾ ಆ ಆತ್ಮಗಳ ಮೇಲೆ ಹಿಡಿತ ಸಾಧಿಸಿದ ಕೆಟ್ಟ ಶಕ್ತಿಗಳು ತಮ್ಮ ಆಹಾರವಾಸನೆಯ ತೃಪ್ತಿಗಾಗಿ ಅಥವಾ ಇತರ ವಾಸನೆಗಳ ಪೂರ್ತಿಗಾಗಿ ಆಹಾರವಾಸನೆಯ ಮಾಧ್ಯಮದಿಂದ ಅಥವಾ ಇತರ ರೀತಿಗಳಲ್ಲಿ (ಉದಾ. ಕನಸಿನಲ್ಲಿ ಪದೇಪದೇ ಹಾವು ಕಾಣಿಸುವುದು) ತೊಂದರೆಗಳನ್ನು ಕೊಡುತ್ತಾರೆ. ಕಾರಣವಿಲ್ಲದೆ ಅತಿಯಾಗಿ ಹಸಿವಾಗುವುದು, ಆಗಾಗ ವಿವಿಧ ರೀತಿಯ ಅನ್ನಪದಾರ್ಥಗಳನ್ನು ತಿನ್ನುವ ಇಚ್ಛೆಯಾಗುವುದು, ಹಸಿವು ಕಡಿಮೆಯಾಗುವುದು, ಒಮ್ಮೆಲೇ ಸಾರಾಯಿ-ಸಿಗರೇಟುಗಳಂತಹ ವ್ಯಸನ ತಗಲುವುದು ಇಂತಹ ಆಹಾರ ವಾಸನೆಗೆ ಸಂಬಂಧಪಟ್ಟ ಲಕ್ಷಣಗಳನ್ನು ನಾವು ಕೆಲವು ಸಲ ಅನುಭವಿಸುತ್ತೇವೆ; ಆದರೆ 'ಕೆಟ್ಟ ಶಕ್ತಿಗಳ ತೊಂದರೆಗಳಿಂದ ಹೀಗೆ ಆಗುತ್ತದೆ' ಎಂಬ ಕಲ್ಪನೆಯೂ ನಮಗೆ ಇರುವುದಿಲ್ಲ. ಇದಕ್ಕೆ ಉಪಾಯವೆಂದು ಅತೃಪ್ತ ಪೂರ್ವಜರ ಲಿಂಗದೇಹಗಳನ್ನು ಅಥವಾ ಇತರ ಕೆಟ್ಟ ಶಕ್ತಿಗಳನ್ನು ತೃಪ್ತಿಪಡಿಸುವಂತಹ ಘಟಕಗಳನ್ನು ತೊಂದರೆಯಿರುವ ವ್ಯಕ್ತಿಯ ಮೇಲಿನಿಂದ ನಿವಾಳಿಸಬೇಕು. ಆ ಘಟಕಗಳನ್ನು ವ್ಯಕ್ತಿಯ ಮೇಲಿನಿಂದ ನಿವಾಳಿಸುವುದರಿಂದ ಅವನ ತೊಂದರೆಗಳು ಕಡಿಮೆಯಾಗಲು ಸಹಾಯವಾಗುತ್ತದೆ. ನಿವಾಳಿಸಲು ಯಾವ ಪದಾರ್ಥಗಳನ್ನು ಅಥವಾ ಘಟಕಗಳನ್ನು ಉಪಯೋಗಿಸಬೇಕು, ನಿವಾಳಿಸುವ ಪದ್ಧತಿಗಳು ಯಾವುವು, ನಿವಾಳಿಸಿರುವುದನ್ನು ಮೂರುದಾರಿಯ ಮೇಲೆ ಏಕೆ ಇಡಬೇಕು, ನಿವಾಳಿಸಿರುವುದನ್ನು ನೀರಿನಲ್ಲಿ ಏಕೆ ಮತ್ತು ಯಾವಾಗ ವಿಸರ್ಜಿಸಬೇಕು ಇಂತಹ ಅನೇಕ ಪ್ರಶ್ನೆಗಳ ಅಧ್ಯಾತ್ಮಶಾಸ್ತ್ರೀಯ ಕಾರಣಗಳನ್ನು ಈ ಗ್ರಂಥದಲ್ಲಿ ನೀಡಲಾಗಿದೆ.

ವ್ಯಕ್ತಿಯು ತ್ರಾಸದಾಯಕ ಸ್ಪಂದನಗಳಿಂದಾಗಿ ತೊಂದರೆಗೊಳಗಾಗುವುದೆಂದರೆ, ಆತನಿಗೆ 'ದೃಷ್ಟಿ ತಗಲುವುದು'. ಹೇಗೆ ವ್ಯಕ್ತಿಗೆ ದೃಷ್ಟಿ ತಗಲುತ್ತದೆಯೋ, ಹಾಗೆಯೇ

ವಾಸ್ತು, ವಾಹನ ಮತ್ತು ಗಿಡಮರಗಳಿಗೂ ದೃಷ್ಟಿ ತಗಲುತ್ತದೆ. ಮನೆಗೆ ದೃಷ್ಟಿ ತಗಲಿದರೆ ಮನೆಯಲ್ಲಿ ವಾಸಿಸುವವರಿಗೆ ಶಾರೀರಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ತೊಂದರೆಗಳಾಗುತ್ತವೆ. ವಾಹನಕ್ಕೆ ದೃಷ್ಟಿ ತಗಲಿದರೆ ಅಪಘಾತವಾಗುವ ಸಾಧ್ಯತೆಯಿರುತ್ತವೆ. ಮರಕ್ಕೆ ದೃಷ್ಟಿ ತಗಲಿದರೆ ಅದರ ಫಲಗಳ ಮೇಲೆ ವಿಪರೀತ ಪರಿಣಾಮವಾಗುತ್ತದೆ, ಕೆಲವು ಸಲ ಆ ಮರ ಸಾಯುತ್ತದೆ (ಒಣಗಿ ಬಿದ್ದು ಹೋಗುತ್ತದೆ). ವಾಸ್ತು, ವಾಹನ ಮತ್ತು ಗಿಡ ಮರಗಳಿಗೆ ದೃಷ್ಟಿ ತಗಲಬಾರದೆಂದು ಯಾವ ಉಪಾಯಗಳನ್ನು ಮಾಡಬೇಕು, ಹಾಗೆಯೇ ಅವುಗಳಿಗೆ ದೃಷ್ಟಿ ತಗಲಿದರೆ ಅದನ್ನು ತೆಗೆಯುವ ಪದ್ಧತಿ ಇತ್ಯಾದಿಗಳನ್ನೂ ಈ ಗ್ರಂಥದಲ್ಲಿ ಕೊಡಲಾಗಿದೆ.

ನಿವಾಳಿಸುವುದು, ದೃಷ್ಟಿಯನ್ನು ತೆಗೆಯುವುದು ಇಂತಹ ಪದ್ಧತಿಗಳು ಕೆಟ್ಟ ಶಕ್ತಿಗಳ ತೊಂದರೆಗಳನ್ನು ದೂರಗೊಳಿಸುವ ಸ್ಥೂಲ ಪದ್ಧತಿಗಳಾಗಿವೆ. ದೃಷ್ಟಿಯನ್ನು ತೆಗೆಯಲು ಬೇಕಾಗುವ ವಸ್ತುಗಳು, ದೃಷ್ಟಿಯನ್ನು ತೆಗೆಯುವ ವ್ಯಕ್ತಿ ಮತ್ತು ದೃಷ್ಟಿಯನ್ನು ಇಳಿಸಿ (ನಿವಾಳಿಸಿ) ವಸ್ತುಗಳನ್ನಿಡುವ ಸ್ಥಳ ಇವು ಉಪಲಬ್ಧವಿಲ್ಲದಿದ್ದರೆ ಏನು ಮಾಡಬೇಕು ? 'ತಮ್ಮ ಉಪಾಸ್ಯದೇವತೆಗೆ ದೃಷ್ಟಿಯನ್ನು ತೆಗೆಯಲು ಪ್ರಾರ್ಥನೆಯನ್ನು ಮಾಡಿ, ದೇವತೆಯೇ ನಮ್ಮ ದೃಷ್ಟಿಯನ್ನು ತೆಗೆಯುತ್ತಿದ್ದಾಳೆ', ಎಂದು ಕಲ್ಪನೆಯನ್ನು ಮಾಡಿ ಆ ಕೃತಿಯ ಸ್ಮರಣೆಯನ್ನು ಮಾಡಬೇಕು, ಇದು ಇದರ ಮೇಲಿನ ಉಪಾಯವಾಗಿದೆ. ಇದು ಮಾನಸ (ಮನಸ್ಸಿನಿಂದ) ದೃಷ್ಟಿ ತೆಗೆಯುವ ಪದ್ಧತಿಯಾಗಿದೆ. ಮನಸ್ಸಿನಿಂದ ದೃಷ್ಟಿ ಯನ್ನು ತೆಗೆಯುವುದು ಹೆಚ್ಚು ಸೂಕ್ಷ್ಮ ಉಪಾಯವಾಗಿರುವುದರಿಂದ ದೃಷ್ಟಿಯು ಸರಿಯಾಗಿ ಹೋಗಲು ದೃಷ್ಟಿ ತೆಗೆಯುವವನಲ್ಲಿ ಈಶ್ವರನ ಬಗ್ಗೆ ಭಾವ ಮತ್ತು ತಳಮಳವಿರಬೇಕು ಅಥವಾ ಅವನ ಆಧ್ಯಾತ್ಮಿಕ ಮಟ್ಟ ಶೇ. ೫೦ ಕ್ಕಿಂತ ಹೆಚ್ಚಿಗಿರುವುದು ಆವಶ್ಯಕವಾಗಿದೆ. ಈ ಗ್ರಂಥದಲ್ಲಿ ಮಾನಸ ದೃಷ್ಟಿಯನ್ನು ತೆಗೆಯುವ ಪದ್ಧತಿಗಳನ್ನೂ ಕೊಡಲಾಗಿದೆ.

'ಉಪ್ಪು-ಸಾಸಿವೆ, ತೆಂಗಿನಕಾಯಿ, ಲಿಂಬೆ ಇತ್ಯಾದಿಗಳಿಂದ ದೃಷ್ಟಿ ಹೇಗೆ ತೆಗೆಯಬೇಕು ? (ದೃಷ್ಟಿಯ ಬಗ್ಗೆ ಶಾಸ್ತ್ರೀಯ ವಿವೇಚನೆ ಸಹಿತ)' ನಮ್ಮ ಈ ಗ್ರಂಥದಲ್ಲಿ, ಯಾವ ವ್ಯಕ್ತಿಯ ದೃಷ್ಟಿಯನ್ನು ತೆಗೆಯಬೇಕಾಗಿದೆಯೋ, ಅವನ ಮೇಲಿನಿಂದ ದೃಷ್ಟಿ ತೆಗೆಯುವ ವಸ್ತುಗಳನ್ನು ಏಕೆ ನಿವಾಳಿಸಬೇಕು, ದೃಷ್ಟಿಯನ್ನು ತೆಗೆಯುವಾಗ ಭಾವವು ಏಕೆ ಮಹತ್ವದ್ದಾಗಿರುತ್ತದೆ, ದೃಷ್ಟಿ ತೆಗೆಯುವ ವ್ಯಕ್ತಿಯ ಮೇಲೆ ದೃಷ್ಟಿ ಹೋಗುವುದು ಹೇಗೆ ಅವಲಂಬಿಸಿರುತ್ತದೆ, ಇಂತಹ ಅನೇಕ ಪ್ರಶ್ನೆಗಳ ಉತ್ತರಗಳನ್ನು ನೀಡಲಾಗಿದೆ. ಈ ವಿಷಯಗಳು ಪುನಃ ಮರುಕಳಿಸಬಾರದೆಂದು ಈ ಉತ್ತರಗಳನ್ನು ನಾವು ಈ ಗ್ರಂಥದಲ್ಲಿ ನೀಡಿಲ್ಲ.

ಅಧ್ಯಾತ್ಮವು ಅನುಭೂತಿಯ ಶಾಸ್ತ್ರವಾಗಿದೆ. ಅಧ್ಯಾತ್ಮದಲ್ಲಿ ಹೇಳಲಾಗಿರುವ ಯಾವುದಾದರೊಂದು ಕೃತಿಯ ಬಗ್ಗೆ ಅನುಭೂತಿಯು ಬಂದರೆ, ಆ ಕೃತಿಯ ಹಿಂದಿನ ಶಾಸ್ತ್ರದ ಮೇಲೆ ಕೂಡಲೇ ಶ್ರದ್ಧೆ ನಿರ್ಮಾಣವಾಗುತ್ತದೆ. ಸಾಧಕರಿಗೆ ನಿವಾಳಿಸುವುದು,

卐 ——— 卐

ಮಾನಸ ದೃಷ್ಟಿ ಇಂತಹ ಉಪಾಯಗಳ ಸಂದರ್ಭದಲ್ಲಿ ಬಂದಿರುವ ವಿವಿಧ ಅನುಭೂತಿಗಳನ್ನು ಗ್ರಂಥದಲ್ಲಿ ಪ್ರಕಟಿಸಿರುವ ಉದ್ದೇಶವೂ ವಾಚಕರ ಶ್ರದ್ಧೆಯನ್ನು ಹೆಚ್ಚಿಸುವುದೇ ಆಗಿದೆ.

ಈ ಗ್ರಂಥದಲ್ಲಿ ನೀಡಿರುವ ಉಪಾಯಗಳನ್ನು ಮಾಡಿ ಆದಷ್ಟು ಹೆಚ್ಚು ಜನರ ಕೆಟ್ಟ ಶಕ್ತಿಗಳ ತೊಂದರೆಗಳು ದೂರವಾಗಲೆಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ !

**– ಸಂಕಲನಕಾರರು**

卐 ——— 卐

**ಅನುಕ್ರಮಣಿಕೆ**

ಕೆಲವು ಮಹತ್ವದ ಅಂಶಗಳನ್ನು '*' ಈ ಗುರುತಿನಲ್ಲಿ ತೋರಿಸಲಾಗಿದೆ


೧. ನಿವಾಳಿಸುವುದು (ಇಳಿ, ಇಳಿ ನೀಡುವುದು) ೧೩

* ನಿವಾಳಿಸುವುದರ ಹಿಂದಿನ ಶಾಸ್ತ್ರ ೧೩

* ನಿವಾಳಿಸುವಾಗ ಆಗುವ ಪ್ರಕ್ರಿಯೆ ೧೩

* ನಿವಾಳಿಸುವ (ಇಳಿ ಕೊಡುವ) ಎರಡು ಪದ್ಧತಿಗಳು ೧೪

೨. ವಾಸ್ತುವನ್ನು ದೃಷ್ಟಿ ತಗಲುವುದರಿಂದ ರಕ್ಷಿಸುವುದು ೪೪

೩. ವಾಹನವನ್ನು ದೃಷ್ಟಿ ತಗಲುವುದರಿಂದ ರಕ್ಷಿಸುವುದು ೫೨

೪. ಗಿಡಮರಗಳಿಗೆ ದೃಷ್ಟಿ ತಗಲುವುದರಿಂದ ರಕ್ಷಿಸುವುದು ೫೫

೫. ಸ್ಥೂಲದಿಂದ ದೃಷ್ಟಿ ತೆಗೆಯುವುದು ಮತ್ತು ಸೂಕ್ಷ್ಮದಿಂದ ಮಾನಸ ದೃಷ್ಟಿ ತೆಗೆಯುವುದು ೬೦

೬. ಮಾನಸ ದೃಷ್ಟಿ ತೆಗೆಯುವುದು ೬೧

೭. ನಿವಾಳಿಸುವುದು ಮತ್ತು ದೃಷ್ಟಿಯನ್ನು ತೆಗೆಯುವುದರ ಮಿತಿ ಮತ್ತು ಸಾಧನೆಯ ಮಹತ್ವ ೭೫

卐 ಸಂಕಲನಕಾರರ ವೈಜ್ಞಾನಿಕ ದೃಷ್ಟಿಕೋನ ಮತ್ತು ಇತರ ಮಾಹಿತಿ ೭೬



**ಸನಾತನದ ಗ್ರಂಥಗಳನ್ನು ನಿಯಮಿತವಾಗಿ ಖರೀದಿಸುವ ವಾಚಕರಿಗೆ ವಿನಂತಿ !**

ಸನಾತನದ ಹೊಸ ಗ್ರಂಥಗಳ ಬಗ್ಗೆ ತಿಳಿದುಕೊಳ್ಳುವುದಿದ್ದಲ್ಲಿ ಸಂಪರ್ಕಿಸಿ – E-mail : chaitanya.grantha@gmail.com/ಸಂಚಾರವಾಣಿ : 9342599299

'ಸನಾತನ'ದ ಗ್ರಂಥ 'ಆನ್‌ಲೈನ್'ನಲ್ಲಿ ಖರೀದಿಸಲು – **www.SanatanShop.com**